ಸಂಪಾದಕೀಯ

# ಏಕಾಂತದ ಸೆಳೆತ

ಇಂದಿನ ದಿನಗಳಲ್ಲಿ ಕಂಡು ಬರುತ್ತಿರುವ ವಿಪರೀತಗಳ ನಡುವೆ ಸಿಲುಕಿ ನಾವೆಲ್ಲ ಅನೇಕ ವೇಳೆ ಭಾವಿಸುತ್ತೇವೆ, "ಈ ಜಾಗದಿಂದ ಯಾವುದಾದರೂ ಪ್ರಶಾಂತವಾದ ಸ್ಥಳಕ್ಕೆ ಹೋಗಿಬಿಟ್ಟರೆ ಸಾಕು, ಆನಂದವಾಗಿರಬಹುದು..." ಎಂದು. ಆದರೆ ಹೋಗುವುದಾದರೂ ಎಲ್ಲಿಗೆ? ಸದ್ದು, ಗದ್ದಲಗಳಿಂದ ಬೇಸತ್ತು ಯಾವುದಾದರೂ ದೂರದ ಸ್ಥಳಕ್ಕೆ ಹೋಗುವ ಆಸೆಯುಂಟಾಗುವುದು ಸಹಜವೇ. ಆದರೆ ಎಲ್ಲ ಗದ್ದಲಗಳೂ ನಮ್ಮ ಮನಸ್ಸಿನಲ್ಲೇ ಉದ್ಭವಿಸುವುವು ಎಂಬುದು ನಮಗೆ ಹೊಳೆಯುವುದೇ ಇಲ್ಲ. ನಾವು ಎಲ್ಲಿಗೇ ಹೋದರೂ ಹೊರಗಿನ ಹಾಗೂ ಒಳಗಿನ ಆಗುಹೋಗುಗಳನ್ನೆಲ್ಲ ಗುರುತಿಸುವ ಮನಸ್ಸನ್ನು ಮಾತ್ರ ಬಿಡಲಾಗದು. ನಮ್ಮ ಪರಿಚಯದವರನ್ನು ಬಿಡಬಹುದು, ವಸ್ತುಗಳನ್ನು ಬಿಡಬಹುದು, ಮನೆಮಠಗಳನ್ನು ತ್ಯಜಿಸಬಹುದು; ಆದರೆ ಅವುಗಳಲ್ಲಿರುವ ವ್ಯಾಮೋಹ, ಮಮತೆಗಳನ್ನು ಬಿಡದಿದ್ದರೆ ಎಲ್ಲಿಗೇ ಹೋದರೂ ಏಕಾಂತವು ನಮ್ಮಿಂದ ದೂರವೇ ಉಳಿಯುತ್ತದೆ.

ಶ್ರೀರಾಮಕೃಷ್ಣರು ಒಂದು ದೃಷ್ಟಾಂತವನ್ನು ನೀಡುತ್ತಿದ್ದರು. ಒಬ್ಬ ರಾಜನಿಗೆ ತನ್ನ ಮುಗಿಯದ ರಾಜ್ಯಕಾರ್ಯಗಳ ಹಾಗೂ ವೈರಿಗಳ ದಾಳಿಗಳ ಬಗ್ಗೆ ಬೇಸರವುಂಟಾಗಿ ಅವನು ಕಾಡಿಗೆ ಹೊರಟ. ಅಲ್ಲಿಗೆ ಬಂದು ಒಂದು ಆಶ್ರಮದಲ್ಲಿ ನೆಲೆಸುವ ಇಚ್ಛೆಯಿಂದ ಗುರುಗಳನ್ನು ಸಮೀಪಿಸಿದ. ಅವರ ಹಿತನುಡಿಗಳನ್ನೆಲ್ಲ ತಳ್ಳಿಹಾಕಿ ತಾನು ಆಶ್ರಮವಾಸಿಯಾಗುವೆನೆಂದು ಪಟ್ಟುಹಿಡಿದ. ಒಂದೆರಡು ದಿನಗಳಲ್ಲಿ ತನ್ನ ಸೇವೆಗಾಗಿ ಪರಿಜನರನ್ನು ಕರೆಕಳಿಸಿ ಕ್ರಮೇಣ ಅಲ್ಲೇ ರಾಜ್ಯಭಾರವನ್ನು ಪ್ರಾರಂಭಿಸಿದ! ನಮ್ಮ ಪಾಡೂ ಹೀಗೇ ಆದೀತು. ಪಲಾಯನದ ಸೂತ್ರವಾಗಿ ನಾವು ಏಕಾಂತವನ್ನು ಬಯಸಿದರೆ, ಒಳಗಿನ ಸಿದ್ಧತೆಯಿಲ್ಲದಿದ್ದರೆ, ಅತ್ಯಂತ ಪ್ರಶಾಂತವಾದ ವಾತಾವರಣವೂ ಒತ್ತಡಮಯವಾಗಿ ಪರಿಣಮಿಸುವುದು. ಹೊರಗಿನ ಶಬ್ದಗಳೆಲ್ಲವೂ ಒಳಗಿನ ಚಂಚಲತೆಯ ಪ್ರತಿಬಿಂಬವಷ್ಟೆ.

ಹಿಂದಿನ ಕಾಲಗಳಲ್ಲಿ ಋಷಿಮುನಿಗಳು ಗಿರಿಗಹ್ವರಗಳಲ್ಲಿ, ನದಿಯ ತೀರಗಳಲ್ಲಿ ವಾಸಿಸುತ್ತ ಮನನಶೀಲರಾಗಿ, ಮೌನವನ್ನು ಅಭ್ಯಾಸಮಾಡುತ್ತ ಸಾಧನೆ, ತಪಸ್ಸುಗಳಲ್ಲಿ ನಿರತರಾಗಿರುತ್ತಿದ್ದರು. ಆಗಿನ ಕಾಲಗಳಲ್ಲಿ ಇಂದಿನಂತೆ ಕಾರ್ಖಾನೆಗಳ ಗದ್ದಲವಿರಲಿಲ್ಲ, ಸರ್ವವ್ಯಾಪಿಯಾದ ವಾಹನಗಳ ಕರ್ಕಶ ಧ್ವನಿಗಳಿರಲಿಲ್ಲ, ಅಂತರಿಕ್ಷದಲ್ಲಿಯೂ ಶಬ್ದಮಾಲಿನ್ಯವನ್ನು ಮಾಡುವ ವಿಮಾನಗಳಿರಲಿಲ್ಲ. ಆದರೂ ಅಂತರ್ಮುಖಿಗಳಾಗಲು ಇವರು ಜನಜಂಗುಳಿಯನ್ನು ತೊರೆದು ಪ್ರಶಾಂತಸ್ಥಳಗಳಿಗೆ ತೆರಳುತ್ತಿದ್ದರು. ಈಗಲೂ ಆಶ್ರಮ, ಮಠ, ತೀರ್ಥಕ್ಷೇತ್ರಗಳನ್ನು ನೆನೆಸಿಕೊಂಡರೆ ನಮ್ಮ ಮನಸ್ಸಿಗೆ ಮೊದಲು ಬರುವುದು ಪ್ರಶಾಂತವಾದ, ಗಿಡಮರಗಳಿಂದ ತುಂಬಿರುವ ಕುಟೀರಗಳ, ದೇವಸ್ಥಾನಗಳ ಚಿತ್ರ. ಆದರೆ ಶ್ರೀರಾಮಕೃಷ್ಣರ, ಶ್ರೀಮಾತೆಯವರ ಜೀವನಗಳಲ್ಲಿ ಒಂದು ವಿಚಿತ್ರವನ್ನು ಕಾಣುತ್ತೇವೆ. ವಿಶಾಲವಾದ, ಪ್ರಶಾಂತವಾದ ಹಳ್ಳಿಯ ಶುಭ್ರ ಪರಿಸರವನ್ನು ಬಿಟ್ಟು ಕೊಲ್ಕತಾದಂತಹ ರಾಜಧಾನಿಗೆ ಬಂದು ನೆಲೆಸಿದರು! ಪಕ್ಕದಲ್ಲಿಯೇ ಸುಮಧುರವಾದ ಮಂಜುಳ ನಿನಾದವನ್ನು ಹೊಮ್ಮಿಸಿ ಹರಿಯುತ್ತಿದ್ದ ಗಂಗಾನದಿ ಇತ್ತು. ಆದರೆ ಆ ನದಿಯಲ್ಲಿ ಮೀನು ಹಿಡಿಯುವ ಹಾಗೂ ಸರಕುಗಳನ್ನು ಹೊತ್ತು ಸಂಚರಿಸುವ ದೋಣಿಗಳು, ಸ್ಟೀಮರ್‌ಗಳು, ಜಹಜುಗಳು ಅನೇಕ. ಸುಂದರವಾದ ಉದ್ಯಾನವನವಿತ್ತು. ಅನೇಕ ಪಕ್ಷಿಗಳ ಇಂಚರದಿಂದ ಅದು ಮನೋಹರವಾಗಿದ್ದರೂ ಬಳಿಯಲ್ಲಿಯೇ ಇದ್ದ ಗನ್ (ಬೆಂಕಿಕಡ್ಡಿಯ ಮದ್ದಿನ) ಫ್ಯಾಕ್ಟರಿಯಿಂದ ಬಹಳ ಶಬ್ದವೂ ಆಗುತ್ತಿತ್ತು. ಇದರೊಂದಿಗೆ ದೇವಸ್ಥಾನಕ್ಕೆ ಬರುತ್ತಿದ್ದ ನಾನಾ ರೀತಿಯ ಜನರು! ಇದೆಲ್ಲದರ ಮಧ್ಯೆ ಶ್ರೀರಾಮಕೃಷ್ಣರು ಎಂತಹ ಏಕಾಂತವನ್ನು ಸಾಧಿಸಿದ್ದರು!

ಹೇಗೆ ಸಾಧಿಸಿದರು ಎಂಬ ಪ್ರಶ್ನೆಗೆ ಈ ಘಟನೆಯೇ ಉತ್ತರ: ಆಗ ತಾನೇ ದಕ್ಷಿಣೇಶ್ವರಕ್ಕೆ ಬರಲು ಪ್ರಾರಂಭಿಸಿದ್ದ ತೀಕ್ಷ್ಣ ಮತಿಯ ಯುವಕ ನರೇಂದ್ರನಾಥ ದತ್ತ, ಕೊಲ್ಕತಾದಲ್ಲಿ ಹುಟ್ಟಿಬೆಳೆದವ. ಶ್ರೀರಾಮಕೃಷ್ಣರ ಪ್ರಭಾವಕ್ಕೊಳಗಾಗಿ ಆತ ದಕ್ಷಿಣೇಶ್ವರಕ್ಕೆ ಬರುತ್ತಿದ್ದ. ಈತ ಧ್ಯಾನಸಿದ್ಧನೆಂದು ಶ್ರೀರಾಮಕೃಷ್ಣರೇ ಹೇಳುತ್ತಿದ್ದರು. ಅನಾಯಾಸವಾಗಿ, ನಿದ್ರೆಯ ಸಮಯದಲ್ಲೂ ಸಮಾಧಿಯನ್ನೇ ಹೊಂದುತ್ತಿದ್ದ ಅದ್ಭುತ ವ್ಯಕ್ತಿ ಈತ. ಅಂತಹ ನರೇಂದ್ರನೊಮ್ಮೆ ಶ್ರೀರಾಮಕೃಷ್ಣರ ಬಳಿಗೆ ಬಂದು ಅಸಮಾಧಾನ ವ್ಯಕ್ತಪಡಿಸಿದ. ಪಕ್ಕದ ಗನ್ ಪೌಡರ್ ಕಾರ್ಖಾನೆಯು ಗಾಳಿಯನ್ನು ಹೊರಹಾಕುವಾಗ ಬಹಳ ಶಬ್ದವಾಗುತ್ತದೆ, ಪಂಚವಟಿಯಲ್ಲಿ ಕುಳಿತು ಧ್ಯಾನ ಮಾಡಲಾಗುತ್ತಿಲ್ಲ, ಎಂಬುದೇ ಅವನ ತಕರಾರು. ಶ್ರೀರಾಮಕೃಷ್ಣರು ಅವನಿಗೆ ನೀಡಿದ ಉತ್ತರವು ಅನಿರೀಕ್ಷಿತವಷ್ಟೇ ಅಲ್ಲ, ಅಸಾಧಾರಣವೂ ಹೌದು: "ಆ ಶಬ್ದದ ಜಾಡನ್ನೇ ಹಿಡಿದು ಅದರ ಮೇಲೆಯೇ ಮನಸ್ಸನ್ನು ಏಕಾಗ್ರಗೊಳಿಸು. ಧ್ಯಾನ ಸಿದ್ಧಿಸುವುದು!" ಎಂದರು.

ನರೇಂದ್ರ ಹಾಗೇ ಮಾಡಿದ. ಇದು ಶ್ರೀರಾಮಕೃಷ್ಣರ ದೃಷ್ಟಿ

ನಾಽಯಂ ತೇ ಸಮಯೋ ರಹಸ್ಯಮಧುನಾ ನಿದ್ರಾತಿ ನಾಥೋ ಯದಿ
ಸ್ಥಿತ್ವಾ ದ್ರಕ್ಷ್ಯತಿ ಕುಪ್ಯತಿ ಪ್ರಭುರಿತಿ ದ್ವಾರೇಷು ಯೇಷಾಂ ವಚಃ ।
ಚೇತಸ್ತಾನಪಹಾಯ ಯಾಹಿ ಭವನಂ ದೇವಸ್ಯ ವಿಶ್ವೇಶಿತುಃ
ನಿರ್ದೌವಾರಿಕನಿರ್ದಯೋಕ್ತ್ಯಪುರುಷಂ ನಿಸ್ಸೀಮಶರ್ಮಪ್ರದಂ ॥ (ವೈರಾಗ್ಯಶತಕ, ೯೬)

ಎಲೈ ಮನಸ್ಸೇ! ಯಾವ ಪ್ರಭುಗಳ ಬಾಗಿಲಲ್ಲಿ ನಿಂತರೆ, "ಇದು ನಿನಗೆ ಸಮಯವಲ್ಲ, ಈಗ ಏಕಾಂತದಲ್ಲಿ ಒಡೆಯನು ಮಲಗಿದ್ದಾನೆ, ನೋಡಿದರೆ ಕೋಪಿಸಿಕೊಳ್ಳುತ್ತಾನೆ" ಎಂಬ ಮಾತುಗಳನ್ನು ಕೇಳಬೇಕಾಗುತ್ತವೆಯೋ ಅಂತಹವರನ್ನು ಬಿಟ್ಟು ದ್ವಾರಪಾಲಕರಿಲ್ಲದ, ನಿಷ್ಠುರವಾದ ಮಾತುಗಳಿಂದ ನೋಯಿಸದ, ಎಲ್ಲೆಯಿಲ್ಲದ ಸುಖವನ್ನು ಶಾಂತಿಯನ್ನು ನೀಡುವ ವಿಶ್ವೇಶ್ವರನ ದೇವಾಲಯಕ್ಕೆ ಹೋಗು.

ಕೋನವನ್ನು ಸ್ಪಷ್ಟವಾಗಿ ತಿಳಿಸಿಕೊಡುತ್ತದೆ. ಶ್ರೀಮಾತೆಯೂ ಸಹ ನಹಬತ್‌ಖಾನೆ (ದಕ್ಷಿಣೇಶ್ವರ ದೇವಸ್ಥಾನದ ಆವರಣದಲ್ಲಿದ್ದ ವಾದ್ಯಸಂಗೀತದ ಕೋಣೆ) ಎಂಬ ಇಕ್ಕಟ್ಟಿನ ಜಾಗದಲ್ಲೇ ಎಲ್ಲ ಪಡಿಪದಾರ್ಥಗಳನ್ನು ಇಟ್ಟುಕೊಂಡು, ರಾಮಕೃಷ್ಣರಿಗೆ ಮತ್ತು ಅವರನ್ನು ಕಾಣಲು ಬರುತ್ತಿದ್ದ ಭಕ್ತರಿಗೆ ಅಡುಗೆ ಮಾಡುತ್ತ, ಒಂದು ಲಕ್ಷ ಜಪವನ್ನು ಮಾಡುತ್ತಿದ್ದರು! ಏಕಾಂತದಲ್ಲಿ ಕುಳಿತರೂ ಇಷ್ಟೊಂದು ಜಪವನ್ನು ಮಾಡುವುದು ದುಸ್ಸಾಧ್ಯವೇ ಎಂದಮೇಲೆ ಅಂತರಂಗದ ಏಕಾಂತವನ್ನು ಇವರು ನಿಶ್ಚಿತವಾಗಿ ಸಾಧಿಸಿದ್ದರೆಂದು ತಿಳಿದುಬರುತ್ತದೆ. ಅರಮನೆಯ ಎಲ್ಲ ಸುಖಸಂಪತ್ತುಗಳ ನಡುವೆಯೂ ಬುದ್ಧ ಏಕಾಂಗಿಯಾದ. ಈ ಭಾವನೆಯೇ ಬಾಹ್ಯ ಏಕಾಂತವನ್ನು ಅರಸು ವಂತೆ ಮಾಡಿ, ನಿರ್ವಾಣದಲ್ಲಿ ಕೊನೆಗೊಂಡಿತು.

ಇವರುಗಳ ಜೀವನದಿಂದ ತಿಳಿದು ಬರುವುದೇನೆಂದರೆ ಏಕಾಕಿಯಾಗಿರಲು ಬಯಸುವ ಮೊದಲು ನಾವು ಚಿತ್ತಕ್ಷೋಭೆಗಳಿಗೆ ಅತೀತರಾಗಿರಬೇಕು, ಮನಸ್ಸಿನ ಮೇಲೆ ಹತೋಟಿಯನ್ನು ಸಾಧಿಸಿರಬೇಕು. ಭಗವದ್ಗೀತೆಯಲ್ಲಿ (೬ . ೧೦) ಧ್ಯಾನ ಮಾಡುವ ವಿಧಾನವನ್ನು ತಿಳಿಸುತ್ತ ನಿರ್ಜನಪ್ರದೇಶದಲ್ಲಿ, ಏಕಾಂತದಲ್ಲಿದ್ದು, ಮನಸ್ಸನ್ನು ಗೆಲ್ಲಬೇಕು ಎಂದು ಶ್ರೀಕೃಷ್ಣ ಹೇಳುತ್ತಾನೆ. ಶ್ರೀಶಂಕರಾಚಾರ್ಯರು ಈ ಶ್ಲೋಕಕ್ಕೆ ಅರ್ಥನೀಡುತ್ತ ಹೇಳುತ್ತಾರೆ, **ಆತ್ಮಾನಂ ಅಂತಃಕರಣಂ ರಹಸಿ ಏಕಾಂತೇ ಗಿರಿಗುಹಾದೌ ಸ್ಥಿತಃ ಸನ್ ಏಕಾಕೀ ಅಸಹಾಯಃ**— ಸಾಧಕನು ತನ್ನನ್ನು ಅಂದರೆ ತನ್ನ ಬುದ್ಧಿ, ಅಹಂಕಾರ, ಮನಸ್ಸೇ ಮೊದಲಾದ ಇಂದ್ರಿಯಗಳನ್ನು (ಅಂತಃಕರಣ), ಯಾವುದು ಆಂತರಿಕ ಹಾಗೂ ಬಾಹ್ಯ ಕ್ರಿಯೆ, ಅನುಭವಗಳಿಗೆ ಕಾರಣವೋ ಅದನ್ನು, ತಿಳಿಯಲೋಸುಗ, ನಿಗ್ರಹಿಸಲೋಸುಗ ಗುಹೆ ಮುಂತಾದ ನಿರ್ಜನ ಪ್ರದೇಶಗಳಲ್ಲಿ ನೆಲಸಿ, ಭಗವಂತನಲ್ಲಿ ನಿರ್ಭರತೆಯನ್ನು ಗಳಿಸಲು ಬೇರಾವುದನ್ನೂ ಆಶ್ರಯಿಸದೆ ಅಸಹಾಯಕನಂತಿರಬೇಕು. ನಾವು ಏಕಾಂತವನ್ನು ಎಷ್ಟೇ ಬಯಸಿದರೂ, ಏಕಾಂತ ದೊರೆತಾಗ, ನಮ್ಮ ಮನಸ್ಸಿನ ಆಳದಿಂದ ಏಳುವ ಚಿಂತೆ–ಆಲೋಚನೆಗಳು, ಭಯ–ಸಂಕೋಚಗಳು, ನಮ್ಮ ಚೈತನ್ಯವನ್ನೇ ತಲ್ಲಣಗೊಳಿಸುವಷ್ಟು ನಿಬಿಡವಾಗಿಬಿಡಬಹುದು. ನಿಶ್ಶಬ್ದ ವಾತಾವರಣದಲ್ಲಿ ಒಂದು ಸಣ್ಣ ಆಲೋಚನೆಯೂ ಬಿರುಗಾಳಿಯಂತೆ ರಭಸ ತಾಳುವುದು. ಏಕಾಂತವಾಸವನ್ನು ಸಾಧಿಸಲು ಧೈರ್ಯವಿರಬೇಕು, ಮನಸ್ಸಿನ ವಿರುದ್ಧ ಹೋರಾಡುವ ಛಲವಿರಬೇಕು, ತಾಳ್ಮೆಯಿರಬೇಕು.

ಶ್ವೇತಾಶ್ವತರ ಉಪನಿಷತ್ತಿನ ಎರಡನೆಯ ಅಧ್ಯಾಯದ ಹತ್ತನೆಯ ಶ್ಲೋಕದಲ್ಲಿ **ಶಬ್ದಜಲಾಶ್ರಯಾದಿಭಿಃ ಅನುಕೂಲೇ** ಎಂದು ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ. ಅಂದರೆ ಮನಸ್ಸನ್ನು ಚಂಚಲಗೊಳಿಸುವಂತಹ ಶಬ್ದವಿರಬಾರದು. ನೀರಿರಬೇಕಾದುದು ಅವಶ್ಯವಾದರೂ ಅನೇಕ ರೀತಿಯ ಜನರಿಗೆ ಆಶ್ರಯವಾಗಿರುವ ಜಲಾಶಯದಂತಹ ಜನನಿಬಿಡ ಜಾಗವಾಗಿರಬಾರದು; ವಾಸಕ್ಕೆ ತೊಂದರೆಯಾಗಬಾರದು, ಆದರೆ ತೀರ್ಥಕ್ಷೇತ್ರ ಅಥವಾ ಧರ್ಮಶಾಲೆಯಂತಹ ಗದ್ದಲದ ಸ್ಥಳವೂ ಆಗಿರಬಾರದು—ಇಂತಹ ಸ್ಥಳವನ್ನು ಪ್ರಾರಂಭದಲ್ಲಿ ಯೋಗಿಯು ಆಯ್ದುಕೊಳ್ಳಬೇಕು. ತಮ್ಮ ಬಳಿಗೆ ಬರುತ್ತಿದ್ದ ಗೃಹೀ ಭಕ್ತರಿಗೆ ಶ್ರೀರಾಮಕೃಷ್ಣರು ನೀಡುತ್ತಿದ್ದ ಉಪದೇಶವಿದು: "ಭಕ್ತಿ ದೊರಕಬೇಕಾದರೆ, ನಿರ್ಜನ ಪ್ರದೇಶಗಳಿಗೆ ಹೋಗಿ ಇರಬೇಕು. ಬೆಣ್ಣೆ ತೆಗೆಯಬೇಕಾದರೆ ಮೊದಲು ನಿರ್ಜನ ಪ್ರದೇಶದಲ್ಲಿ ಹಾಲಿಗೆ ಹೆಪ್ಪು ಹಾಕಿ ಇಡಬೇಕು; ಅದನ್ನು ಅತಿಯಾಗಿ ಅಲ್ಲಾಡಿಸುತ್ತಿದ್ದರೆ ಅದು ಮೊಸರಾಗದು. ಬಳಿಕ ಉಳಿದ ಎಲ್ಲಾ ಕೆಲಸಕಾರ್ಯಗಳನ್ನೂ ಒಂದು ಮೂಲೆಯಲ್ಲಿ ಕಟ್ಟಿಟ್ಟು, ನಿರ್ಜನ ಪ್ರದೇಶದಲ್ಲಿ ಕುಳಿತು ಅದನ್ನು ಕಡೆಯಬೇಕು. ಆಗ ಬೆಣ್ಣೆ ತೆಗೆಯಲು ಸಾಧ್ಯವಾಗುತ್ತದೆ... ಸಂಸಾರವೇ ನೀರು, ಮನಸ್ಸೇ ಹಾಲು. ಹಾಲನ್ನು ನೀರಿಗೆ ಸುರಿದರೆ ಅವೆರಡೂ ಬೆರೆತು ಒಂದಾಗಿಬಿಡುತ್ತವೆ. ಮತ್ತೆ ಶುದ್ಧ ಹಾಲು ಬೇಕೆಂದರೆ ಕಣ್ಣ ಮೇಲೆ ಕಣ್ಣಿಟ್ಟು ಹುಡುಕಿದರೂ ಅದು ದೊರೆಯುವ ಹಾಗಿಲ್ಲ. ಆದರೆ ಹಾಲಿಗೆ ಹೆಪ್ಪು ಹಾಕಿ ಮೊಸರು ಮಾಡಿ ಬೆಣ್ಣೆ ತೆಗೆದು ಅದನ್ನು

ನೀರಿನಲ್ಲಿ ಇಟ್ಟರೆ, ಅದು ಅಲ್ಲಿ ತೇಲಲಾರಂಭಿಸುತ್ತದೆ" (ಶ್ರೀರಾಮಕೃಷ್ಣ ವಚನವೇದ, ೧:೮೦).

ಇದೇ ಭಾವನೆಯನ್ನು ಕಠೋಪನಿಷತ್ತು ಕಾವ್ಯಮಯವಾಗಿ ವರ್ಣಿಸುತ್ತದೆ: "ಸಮಸ್ತ ಇಂದ್ರಿಯಗಳೂ ದೃಶ್ಯಪ್ರಪಂಚದತ್ತ ಧಾವಿಸುತ್ತಿವೆ. ಹಾಗೆ ಅರಸುತ್ತ ಭೋಗಗಳಲ್ಲಿ ತೃಪ್ತಿ ಕಾಣದೆ ನಶಿಸುತ್ತವೆ. ಹೊರಗಿನ ಬದಲಾಗುವ ಜಗತ್ತನ್ನೇ ಕಾಣುತ್ತ ಕಾಣುತ್ತ ವ್ಯಕ್ತಿಯು ತನ್ನ ಅಂತರಂಗದಲ್ಲಿರುವ ಆತ್ಮವಸ್ತುವನ್ನು ತಿಳಿಯುವುದೇ ಇಲ್ಲ. ಎಲ್ಲೋ ಕೆಲವು ಧೀರರು ತಮ್ಮ ದೃಷ್ಟಿಯನ್ನು ಅಂತರ್ಮುಖಿವಾಗಿಸಿಕೊಂಡು, ಅಮೃತತ್ವವನ್ನು ಬಯಸಿ, ತಮ್ಮಲ್ಲಿಯೇ ಇರುವ ಪ್ರತ್ಯಗಾತ್ಮನನ್ನು ಕಂಡುಕೊಳ್ಳುತ್ತಾರೆ" (ಕಠ, ೨.೧.೧). ಮುಂದಿನ ಮಂತ್ರದಲ್ಲಿ ಉಪನಿಷತ್ತು ಇಂತಹ ತಿಳಿವಳಿಕೆಯಿಲ್ಲದೆ ಲೌಕಿಕ ಆಸಕ್ತಿಗಳಲ್ಲೇ ತೊಡಗಿಸಿಕೊಂಡವರನ್ನು **ಬಾಲಾಃ** ಅಂದರೆ ಹುಡುಗುಬುದ್ಧಿಯವರು, ಮೂಢರು ಎಂದು ಕರೆಯುತ್ತದೆ. ಮಸಿಯ ಕೋಣೆಗೆ ಒಮ್ಮೆ ಪ್ರವೇಶಿಸಿದರೆ ನಮಗೆ ತಿಳಿದೋ, ತಿಳಿಯದೆಯೋ ಕಿಂಚಿತ್ತಾದರೂ ಮಸಿ ಮೆತ್ತಿಕೊಳ್ಳುತ್ತದೆ. ಅಂತೆಯೇ ಶ್ರೀರಾಮಕೃಷ್ಣರು ಹೇಳುತ್ತಿದ್ದರು, "ಆಗೊಮ್ಮೆ ಈಗೊಮ್ಮೆ ಏಕಾಂತವಾಸ ಮಾಡದಿದ್ದರೆ ನಮ್ಮ ಮನಸ್ಸು ಈ ಪ್ರಾಪಂಚಿಕ ಆಸಕ್ತಿಗಳಲ್ಲಿ ಎಷ್ಟು ಸಿಕ್ಕಿಹಾಕಿಕೊಂಡಿದೆ ಎಂದು ತಿಳಿಯುವುದೇ ಇಲ್ಲ."

ಆದರೆ ಇದೆಲ್ಲ ಪ್ರಾರಂಭದ ಸಾಧಕರಿಗೆ ಮಾತ್ರ. ಒಮ್ಮೆ ಮನಸ್ಸು ಹಿಡಿತಕ್ಕೆ ಬಂತೆಂದರೆ ಅದು ಚೆನ್ನವಾಗಿ ಬಿಡುತ್ತದೆ; ಅಲ್ಲಿಂದಾಚೆಗೆ ಅದು ಕಲುಷಗೊಳ್ಳದು. ಆದ್ದರಿಂದಲೇ ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿ ಮುಂತಾದವರೆಲ್ಲ ಜನರ ನಡುವೆಯೇ ಇದ್ದು ಸಹ, ಅಂತರಂಗದಲ್ಲಿ ನಿರಂತರವಾದ ಏಕಾಂತವನ್ನು ಅನುಭವಿಸುತ್ತಿದ್ದರು. ಅವರುಗಳ ಮನಸ್ಸು ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಳ್ಳದೆ ಕೇವಲ ಚೈತನ್ಯದ ಬೆಳಕನ್ನು, ಆನಂದವನ್ನು, ಸಹಜತೆಯನ್ನು ಪ್ರತಿಬಿಂಬಿಸುವ ಸಾಧನವಾಗಿತ್ತು. ಇದನ್ನೇ ಶಾಸ್ತ್ರಗಳಲ್ಲಿ **ಸಾಕ್ಷೀಚೇತಾ** ಎಂದೂ ಕರೆಯಲಾಗಿದೆ. ನೀರಿನಲ್ಲಿ ತೇಲುವ ಬೆಣ್ಣೆಯಂತೆ ಇಂತಹವರ ಮನಸ್ಸು ಯಾವುದಕ್ಕೂ ಅಂಟಿಕೊಳ್ಳದು, ಹಾಗಾಗಿ ಸದಾ ಶುಭ್ರವಾಗಿರುತ್ತದೆ.

## ಎಲ್ಲಿಯ ತನಕ ಏಕಾಂತ?

ಶ್ರೀರಾಮಕೃಷ್ಣರಿಂದ ಪ್ರಭಾವಿತರಾಗಿ ಅನೇಕ ಭಕ್ತರು ಸಂಸಾರವನ್ನು ತ್ಯಜಿಸುವ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಿದ್ದರು. ಅವರ ಅಂತರಂಗವನ್ನು ತಿಳಿದಿದ್ದ ಶ್ರೀರಾಮಕೃಷ್ಣರು ಅದಕ್ಕೆ ಸಮ್ಮತಿಸುತ್ತಿರಲಿಲ್ಲ. ಏಕಾಂತವು ಬಹಳ ಆಕರ್ಷಣೀಯವಾಗಿ ಕಂಡರೂ ತಯಾರಿಯಿಲ್ಲದಿದ್ದರೆ ಅನಾಹುತಕ್ಕೆ ನಾಂದಿಯಾಗುತ್ತದೆ. ಭಾವನೆಗಳ ಸ್ಥಿರತೆಯಿಲ್ಲದೆ ಏಕಾಂತದಲ್ಲಿರುವುದು ಅಸಾಧ್ಯ. ಓದುವ ಹವ್ಯಾಸ ಅಥವಾ ಕಲೆಯ ಹವ್ಯಾಸವುಳ್ಳವರು ಏಕಾಂತವನ್ನು ಬಯಸುವುದು ಸಹಜ. ತಮ್ಮ ಹವ್ಯಾಸದಲ್ಲೇ ಮೈಮರೆಯುವ ಸಾಮರ್ಥ್ಯವನ್ನು ಇವರು ಪಡೆದುಕೊಂಡಿರುತ್ತಾರೆ. ಇಂತಹ ಹವ್ಯಾಸದಿಂದ ತೃಪ್ತಿಯನ್ನು ಹೊಂದಿ ಸಾಮಾನ್ಯ ಜನರನ್ನು ಆಕರ್ಷಿಸುವ ಕ್ಷುಲ್ಲಕ ವಿಷಯಗಳಿಂದ ಇವರು ದೂರವುಳಿಯುತ್ತಾರೆ. ವಿಜ್ಞಾನಿಗಳೂ ಕೂಡ ತಮ್ಮ ಸಂಶೋಧನೆಗಳಲ್ಲಿ ಮುಳುಗಿ ಏಕಾಂತಪ್ರಿಯರಾಗುತ್ತಾರೆ. ಜನರೊಂದಿಗೆ ಸಮರ್ಪಕವಾಗಿ ಭಾವನೆಗಳನ್ನು ವಿನಿಮಯ ಮಾಡಿಕೊಳ್ಳುವುದರಲ್ಲಿ ಅಥವಾ ಜನಸಂಪರ್ಕ ವಿಧಾನಗಳಲ್ಲಿ ಇವರು ಪರಿಣತಿಯನ್ನು ಪಡೆಯದೇ ಹೋಗಬಹುದು. ಆದರೆ ತಮ್ಮ ಧ್ಯೇಯದಲ್ಲಿ, ಹವ್ಯಾಸದಲ್ಲಿ ಏಕಾಂತ ನಿಷ್ಠೆ ಇವರಿಗಿರುತ್ತದೆ. ಅದರಲ್ಲಿ ಅವರಿಗೆ ಆನಂದದ ಅನುಭವವಾಗುತ್ತದೆ.

ಇದೇ ರೀತಿಯಲ್ಲಿ ಸಾಧಕನಾದವನು ತನ್ನಲ್ಲಿ ಇರುವ ಭಗವಂತನ ಸಾನ್ನಿಧ್ಯದಿಂದ ಅಥವಾ ಸಚ್ಚಿದಾನಂದ ಸ್ವರೂಪಿಯಾದ ಆತ್ಮನ ಧ್ಯಾನದಿಂದ ಆನಂದವನ್ನು ಅನುಭವಿಸದಿದ್ದರೆ ಆತ ಏಕಾಂಗಿಯಾಗಿರುವುದು ಅಸಾಧ್ಯವಾಗುತ್ತದೆ. ಮನಸ್ಸು ನಿರಂತರವಾಗಿ ಹೊರಗಿನ ಚಟುವಟಿಕೆಗಳಲ್ಲಿಯೇ ಆಸಕ್ತವಾಗಿದ್ದು ಅವರಿವರ ವಿಚಾರಗಳ ಬಗ್ಗೆ ಗಮನ ನೀಡುತ್ತಿರುತ್ತದೆ. ಆದ್ದರಿಂದಲೇ ಸಾಧನೆಯ ಮೊದಲ ಹಂತದಲ್ಲಿ ಸತ್ಸಂಗದಿಂದ ಒಳ್ಳೆಯ ವಿಚಾರಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡು, ಶ್ರವಣ, ಮನನ, ನಿದಿಧ್ಯಾಸನಗಳನ್ನು ಸಾಧಿಸಲು ಏಕಾಂತದಲ್ಲಿ ನೆಲೆಸಿ, ತಲ್ಲೀನರಾಗಬೇಕು ಎಂದು ಶಾಸ್ತ್ರಗಳು ವಿಧಿಸಿವೆ; ದಿವ್ಯತ್ರಯರೂ ಸೇರಿದಂತೆ ಎಲ್ಲ ಸಂತರೂ ಇದನ್ನೇ ಹೇಳಿದ್ದಾರೆ. ಆತ್ಮತೃಪ್ತರಾದರೆ ಮಾತ್ರ ನಾವು ಏಕಾಂಗಿಯಾಗಿರಬಹುದು. ಅಲ್ಲಿಯ ತನಕ ನಾವು ಸಂಪೂರ್ಣ ಸ್ವತಂತ್ರರಲ್ಲ. ವಸ್ತು ಅಥವಾ ವ್ಯಕ್ತಿಗಳನ್ನು ಅವಲಂಬಿಸಿಯೇ ಜೀವಿಸುತ್ತಿರುತ್ತೇವೆ. ಆದ್ದರಿಂದ ಏಕಾಂತವನ್ನು ಸಾಧಿಸಲು ಆಸೆಗಳನ್ನು ಕಡಮೆ ಮಾಡಿಕೊಳ್ಳುತ್ತ ನಮ್ಮ ಜೀವನದ ಉದ್ದೇಶವಾದ ಭಗವಂತನ ಅನುಭೂತಿಯತ್ತ ಏಕಾಂತಭಕ್ತಿ, ಶ್ರದ್ಧೆಗಳನ್ನು ಸಾಧಿಸಬೇಕು. ಅಲ್ಲಿಯ ತನಕ ಏಕಾಂತದತ್ತ ಸಾಗುವ ಒಲವು ನಮ್ಮನ್ನು ಕಾಡುತ್ತಲೇ ಇರುತ್ತದೆ; ಅತೃಪ್ತಿ, ಗೊಂದಲಗಳೇ ನಮ್ಮ ಸ್ವಭಾವವೆಂದು ಅನಿಸತೊಡಗುತ್ತದೆ. ಏಕಾಂತದ ಸೆಳೆತವು ಕೆಲವರನ್ನು ಸ್ವಾರ್ಥಿಗಳಾಗಿಸುತ್ತದೆ ಮತ್ತೆ ಕೆಲವರನ್ನು ಮುಕ್ತರನ್ನಾಗಿಸುತ್ತದೆ. ಎಲ್ಲರಲ್ಲೂ ಇರುವ ಆತ್ಮವಸ್ತು ಒಂದೇ ಎಂದು ತಿಳಿದ ಜ್ಞಾನಿಯು ಜನಸಮೂಹದ ಮಧ್ಯೆಯಿದ್ದರೂ ನಿತ್ಯ ಏಕಾಕಿ! **ಕಡೆಗೆ ನಾವೆಲ್ಲರೂ ಏಕಾಂಗಿಗಳೇ ಆಗಬೇಕಲ್ಲವೇ! ಯಾರಿಗೆ ಯಾರುಂಟು ಎರವಿನ ಸಂಸಾರ!**